**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ ಮಿಸ್ 60/2023**

ಆರ್ ಡಬ್ಲ್ಯೂ-1

**ದಿನಾಂಕ 20-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು ಶ್ರೀ ಕೆ.ಬಿ.ಜಿ ಅರ್ಜಿದಾರರ ಪರ ವಕೀಲರುಃ**

ನಾನು ಬಿ.ಇ(Mechanical Engineer) ವ್ಯಾಸಂಗ ಮಾಡಿದ್ದೇನೆ. ನಾನು ಮತ್ತು ಅರ್ಜಿದಾರರು ಮದುವೆಯಾಗಿ 6 ವರ್ಷಗಳಾಗಿವೆ. ನಮ್ಮ ಮದುವೆ ದಿಃ 25-03-2019 ರಂದು ನಡೆದಿರುತ್ತದೆ. ನನ್ನ ಜೊತೆ ಅರ್ಜಿದಾರರು ಒಂದು ವರ್ಷ ಜೀವನವನ್ನು ನಡೆಸಿರುತ್ತಾರೆ. ಮದುವೆಯ ಕಾಲದಲ್ಲಿ ಅರ್ಜಿದಾರರು ನನಗೆ ಯಾವುದೇ ವರದಕ್ಷಿಣೆಯನ್ನು ಕೊಟ್ಟಿಲ್ಲ. ನನ್ನ ಮತ್ತು ಅರ್ಜಿದಾರರು ಮದುವೆಯು ಕೆ ಆರ್. ನಗರದ ನಂಜಮ್ಮ ಚೆನ್ನಬಸಪ್ಪ ಕಲ್ಯಾಣ ಮಂಟಪದಲ್ಲಿ ಮದುವೆಯಾಗಿದೆ ಎಂದರೆ ಸರಿ.

**2.** ಸದರಿ ಕಲ್ಯಾಣ ಮಂಟಪದ ಬಾಡಿಗೆ ರೂ. 40,000/- ಎಂದರೆ ನನಗೆ ಗೊತ್ತಿಲ್ಲ. ನಿಪಿ-25 ಸದರಿ ಕಲ್ಯಾಣ ಮಂಟಪದ ರಸೀದಿ ಎಂದರೆ ಸರಿ. ಸದರಿ ಮಂಟಪದ ಹೆಚ್ಚಿನ ಖರ್ಚಾಗಿ 25 ಸಾವಿರ ರೂಗಳು ಖರ್ಚಾಗಿರುತ್ತವೇ ಎಂದರೆ ಸರಿ. ನಮ್ಮ ಮತ್ತು ಅರ್ಜಿದಾರರ ನಡುವೆ ಹಿರಿಯರ ಸಮ್ಮುಖದಲ್ಲಿ ನಡೆದಿರುತ್ತದೆ ಎಂದರೆ ಸರಿ. ಸದರಿ ಮಾತುಕತೆಯಲ್ಲಿ ನನ್ನ ಮತ್ತು ಅರ್ಜಿದಾರರಿಗೆ 400 ಗ್ರಾಂ ಚಿನ್ನ 1 ಕೆ.ಜಿ ಬೆಳ್ಳಿಯನ್ನುವರದಕ್ಷಿಣೆಯಾಗಿ ಕೊಟ್ಟು 10 ಲಕ್ಷ ಹಣವನ್ನು ಖರ್ಚು ಮಾಡಿ ಮದುವೆ ಮಾಡಿ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**3.** ನನಗೆ ಬಟ್ಟೆ ಮತ್ತು ವಾಚ್‌ಗಾಗಿ 70 ಸಾವಿರ ಹಣವನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ, ಮದುವೆಯು 2 ದಿನಗಳ ಕಾಲ ಕಲ್ಯಾಣ ಮಂಟಪದಲ್ಲಿ ನಡೆದಿರುತ್ತದೆ ಎಂದರೆ ಸರಿ. ಸಂಜೆ ಕೇವಲ ಕುಟುಂಬಸ್ಥರು ಮಾತ್ರ ಸೇರಿದ್ದು ಬೆಳಿಗ್ಗೆ ಮಾತ್ರ ಜನರು ಸೇರಿರುತ್ತಾರೆ. ಅರ್ಜಿದಾರರನ್ನು ಕೇವಲ 6

ತಿಂಗಳುಗಳ ಕಾಲ ಮಾತ್ರ ನಮ್ಮ ಮನೆಯಲ್ಲಿ ಇರಿಸಿಕೊಂಡಿದ್ದೇವು ಎಂದರೆ ಸರಿಯಲ್ಲ. 1 ವರ್ಷದವರೆಗೆ ಇದ್ದರು. ಅರ್ಜಿದಾರರು ಗರ್ಭಿಣಿಯಾಗಿದ್ದಾಗ ಅವರಿಗೆ ಮಗು ಆಗುವುದು ಇಷ್ಟವಿರದ ಕಾರಣ ಅವರು ಮಾತ್ರೆಗಳನ್ನು ಸೇವಿಸಿ ಗರ್ಭಪಾತವನ್ನು ಮಾಡಿಸಿಕೊಂಡಿರುತ್ತಾರೆ.

**4**. ನಾವು ಅರ್ಜಿದಾರರನ್ನು ಯಾವುದೇ ಆಸ್ಪತ್ರೆಗೆ ಕರೆದುಕೊಂಡು ಹೋಗಿರಲಿಲ್ಲ. ಅರ್ಜಿದಾರರು ಗರ್ಭಿಣಿಯಾಗಿರುವ ಕುರಿತು ಯಾವುದೇ ದಾಖಲೆ ನಮ್ಮ ಬಳಿ ಇಲ್ಲ ಅವರ ಮನೆಯಲ್ಲಿದೆ. ಅರ್ಜಿದಾರರು ಗರ್ಭಿಣಿಯಾಗಿರುವುದಾಗಿ ಸುಳ್ಳು ಹೇಳುತ್ತಿದ್ದಾರೆ ಎಂದರೆ ಸರಿಯಲ್ಲ. ಮದುವೆಯಾದ ನಂತರ ಅರ್ಜಿದಾರರು ಆಸ್ತಿ ಬೇಡವೆಂದು ಹಕ್ಕು ಖುಲಾಸೆ ಪತ್ರವನ್ನು ಬರೆದು ಕೊಟ್ಟ ವಿಚಾರ ನಮಗೆ 4 ತಿಂಗಳ ನಂತರ ತಿಳಿದುಬಂದಿರುತ್ತದೆ ಎಂದರೆಸ ರಿಯಲ್ಲ. ಸಾಕ್ಷಿ ಮುಂದುವರೆದು ಮದುವೆಗೆ ಮುಂಚಿತವಾಗಿಯೇ ಗೊತ್ತಿತ್ತು ಎಂದು ತಿಳಿಸಿರುತ್ತಾರೆ.

5. ಸದರಿ ವಿಚಾರವು ನನಗೆ ಮದುವೆಯಾದ ನಂತರ ತಿಳಿದು ಬಂದ ನಂತರ ಅವರೊಂದಿಗೆ ವಿನಾಕಾರಣ ಜಗಳ ತೆಗೆದು ತೊಂದರೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಅಕ್ಕನನ್ನು ನಂಜನಗೂಡಿಗೆ ಕೊಟ್ಟು ಮದುವೆ ಮಾಡಿದ್ದೇವೆ. ಅವರ ಗಂಡ ಯಾವುದೇ ನೌಕರಿಯಲಿಲ್ಲ ಆದರೆ ವ್ಯವಹಾರವನ್ನು ಮಾಡುತ್ತಾರೆ. ನಮ್ಮ ತಂದೆ ನಮ್ಮ ಅಕ್ಕನಿಗೆ ಜಮೀನನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯನ್ನು ಕೊಟ್ಟ ನಂತರ ಜಗಳ ಪ್ರಾರಂಭವಾಗಿರುತ್ತದೆ.

6. ನಮ್ಮ ಅಕ್ಕ ನಂದೀನಿ ಅವರು ತಂದೆಯ ಮನೆಯಿಂದ ಆಸ್ತಿಯನ್ನು ಪಡೆದುಕೊಂಡಿರುವಂತೆ ಅರ್ಜಿದಾರರಿಗೂ ಸಹ ತಂದೆಯ ಮನೆಯಿಂದ ಆಸ್ತಿಯನ್ನು ತೆಗೆದುಕೊಂಡು ಬಾ ಎಂದು ಮಾನಸಿಕವಾಗಿ ಮತ್ತು ದೈಹಿಕವಾಗಿ ಕಿರುಕುಳವನ್ನು ಕೊಡುತ್ತಿದ್ದರು ಎಂದರೆ ಸರಿಯಲ್ಲ. ಅರ್ಜಿದಾರರಿಗೆ ನಾವು ತಂದೆಯ ಮನೆಯಿಂದ ಆಸ್ತಿಯನ್ನು ತೆಗೆದುಕೊಂಡು ಬಾ ಎಂದು ಮಾನಸಿಕವಾಗಿ ಮತ್ತು ದೈಹಿಕವಾಗಿ ಕಿರುಕುಳವನ್ನು ಕೊಡುತ್ತಿದ್ದರು ಎಂದರೆ ಸರಿಯಲ್ಲ.

7 . ನಾವೇ ಅರ್ಜಿದಾರರೊಂದಿಗೆ ಜಗಳ ತೆಗೆದು ಮನೆಯಿಂದ ಅವರನ್ನು ಓಡಿಸಿರುತ್ತೇವೆ ಎಂದರೆ ಸರಿಯಲ್ಲ. ನಾನೇ ಅವರನ್ನು ಕರೆದುಕೊಂಡು ಹೋಗಿ ತವರು ಮನೆಗೆ ಬಿಟ್ಟಿದ್ದು ನಮ್ಮ ಅಕ್ಕನ ಜೊತೆ ಜಗಳ ಮಾಡಿಕೊಂಡು ಅವರೇ ಮನೆಬಿಟ್ಟು ಹೋಗಿರುತ್ತಾರೆ. ಅರ್ಜಿದಾರರು ಮನೆ ಬಿಟ್ಟು ಬಂದ ನಂತರ ನಾನು ಅವರ ಮನೆಗೆ ಹೋಗಿ ಅವರ ಯೋಗಕ್ಷೇಮವನ್ನು ವಿಚಾರಿಸಿರುತ್ತೇನೆ.

**8.** ಅರ್ಜಿದಾರರನ್ನು ನಾನು ಅವರ ಮನೆಗೆ ಬಿಟ್ಟು ಬಂದ ನಂತರ ಅವರ ಮನೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 3 ಬಾರಿ ಹೋಗಿರುತ್ತೇನೆ ಎಂದು ತಿಳಿಸಿರುತ್ತಾರೆ. ಒಂದು ಬಾರಿ ನ್ಯಾಯ ಪಂಚಾಯಿತಿಗೆ ಅರ್ಜಿದಾರರೇ ನಮ್ಮ ಮನೆಗೆ ಬಂದಿರುತ್ತಾರೆ. ನಂತರ ಅರ್ಜಿದಾರರು ನಮ್ಮ ಮನೆಗೆ ಬಂದು ಸ್ವಲ್ಪ ದಿನ ಇದ್ದು ನಂತರ ಜಗಳ ತೆಗೆದು ಮನೆ ಬಿಟ್ಟು ಹೋಗಿರುತ್ತಾರೆ. ನಾವೇ ಅವರಿಗೆ ಆಸ್ತಿಯನ್ನು ತೆಗೆದುಕೊಂಡು ಬರದಿದ್ದರೆ ಬರಬೇಡ ಎಂದುನಾವೇ ಅವರನ್ನು ಕಳುಹಿಸಿರುತ್ತೇವೆ ಎಂದರೆ ಸರಿಯಲ್ಲ.

**9.** ನಾವು ಸಹ ಮದುವೆಯ ಆಮಂತ್ರಣ ಪತ್ರಿಕೆಯನ್ನು ಮಾಡಿಸಿ ಹಂಚಿರುತ್ತೇವೆ ಎಂದರೆ ಸರಿ. ಅರ್ಜಿದಾರರು ಸಹ ಉತ್ತಮ ರೀತಿಯಲ್ಲಿ ಅದ್ದೂರಿಯಾಗಿ ಮದುವೆಯನ್ನು ಮಾಡಿರುತ್ತಾರೆ ಎಂದರೆ ಸರಿ. ಮದುವೆಯ ಕಲ್ಯಾಣ ಮಂಟಪದ ಖರ್ಚು ವೆಚ್ಚಗಳನ್ನು ಅರ್ಜಿದಾರರೇ ಭರಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಸಹ ಆರತಕ್ಷತೆ ಕಾರ್ಯಕ್ರಮವನ್ನು ಮಾಡಿ ಹಣವನ್ನು ಖರ್ಚು ಮಾಡಿರುತ್ತೇವೆ ಎಂದು ತಿಳಿಸಿರುತ್ತಾರೆ.

**10.** ಮದುವೆಯ ಸಮಯದಲ್ಲಿ ಪ್ರೀ ವೆಡ್ಡಿಂಗ್ ಶೂಟ್ ಮತ್ತು ಮದುವೆಗೆ 2 ಲಕ್ಷ ಹಣ ಖರ್ಚಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಪ್ರಸ್ತುತ ವ್ಯವಸಾಯವನ್ನು ಮಾಡುತ್ತಿದ್ದೇನೆ. ಎಷ್ಟು ಎಕರೆ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ನಮ್ಮದು ರಾಮನಗರದ ಕನಕಪುರ ಎಂದರೆ ಸರಿ. ಕನಕಪುರದ ವೃತ್ತದ ಬಳಿ ಒಂದು ನಿವೇಶನ ಒಂದು ಕೋಟಿಗಿಂತ ಅಧಿಕವಾಗಿ ಬೆಲೆಬಾಳುತ್ತದೆ ಎಂದರೆ ಸ ರಿಯಲ್ಲ,

**11.** ಕನಕಪುರದಲ್ಲಿ ನಮ್ಮ ತಂದೆಗೆ ಸೇರಿದ ಒಂದೇ ಮನೆ ಇದೆ. ನಿವೇಶನಗಳು ಗೊತ್ತಿಲ್ಲ. ನಿಪಿ-8 ರಲ್ಲಿರುವ ಮೀನು ಸಾಗಾಣಿಕೆಯ ಕೇಂದ್ರ ನಮ್ಮದಲ್ಲ. ಪ್ರಸ್ತುತ ಕನಕಪುರವನ್ನು ಬೆಂಗಳೂರಿನ ದಕ್ಷಿಣ ಎಂದು ನಾಮಕರಣ ಮಾಡಿದ್ದಾರೆ ಎಂದರೆ ಸರಿ. ನಮ್ಮ ತಂದೆಯ ಹೆಸರು ಕೆ.ಎನ್. ನಾಗರಾಜು ಎಂದರೆ ಸರಿ. ನಿಪಿ-11 ಮತ್ತು 12 ನಮ್ಮ ತಂದೆಯ ಹೆಸರಿನಲ್ಲಿದೆ ಎಂದರೆ ಸರಿ. ನಾವು ಒಟ್ಟು 3 ಜನ ಮಕ್ಕಳು.

**12**. ನಿಪಿ-13 ಯಾರಿಗೆ ಸೇರಿದೆ ಎಂದು ನನಗೆ ಗೊತ್ತಿಲ್ಲ. ನಿಪಿ-13 ರಲ್ಲಿರುವ 3 ನಿವೇಶನಗಳು ನಮ್ಮ ತಂದೆಗೆ ಸೇರಿವೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-17 ರಲ್ಲಿ 2 ಎಕರೆ ಜಮೀನು ನಮ್ಮ ತಂದೆಯ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-18 ನು ನಮ್ಮ ತಂದೆಯ ಹೆಸರಿನಲ್ಲಿದೆ ಎಂದರೆ ಸರಿ ಅದರಲ್ಲಿಯೇ ನಾವು ವ್ಯವಸಾಯವನ್ನು ಮಾಡುತ್ತಿದ್ದೇವೆ. ನಿಪಿ-19 ರಲ್ಲಿನ 20 ಗುಂಟೆ ಜಮೀನು ನಮ್ಮ ತಂದೆಯ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-20 ರಲ್ಲಿನ 9 ½ ಗುಂಟೆ ಜಮೀನು ನಮ್ಮ ತಂದೆಯ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ.

13. ನಿಪಿ-21 ರಲ್ಲಿನ 39 ಗುಂಟೆ ಜಮೀನು ನಮ್ಮ ತಂದೆಯ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನು ಕನಕಪುರದಲ್ಲಿದೆ ಎಂದರೆ ನನಗೆ ಗೋತ್ತಿಲ್ಲ. ನಿಪಿ-22 ರಲ್ಲಿನ 31.12 ಗುಂಟೆ ಜಮೀನು ನಮ್ಮ ತಂದೆಯ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-23 ರಲ್ಲಿನ 1 ಎಕರೆ ಜಮೀನು ನಮ್ಮ ತಂದೆಯ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-24 ರಲ್ಲಿನ 1 ಎಕರೆ 8½ ಗುಂಟೆ ಜಮೀನು ನಮ್ಮ ತಂದೆಯ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ.

**14**. ಎಲ್ಲಾ ಜಮೀನುಗಳು ಕನಕಪುರ ನಗರದಲ್ಲಿಯೇ ಇದ್ದು ಎಲ್ಲವೂ ಸಹ ನಿವೇಶನಗಳಾಗಿವೆ ಎಂದರೆ ಸರಿಯಲ್ಲ. ಸದರಿ ಎಲ್ಲಾ ಜಮೀನುಗಳು ಮೌಲ್ಯವು 80 ಕೋಟಿ ಬೆಲೆಬಾಳುತ್ತದೆ ಎಂದರೆ ಸರಿಯಲ್ಲ. ಕೋರೆ ಇರುವ ಜಮೀನಿನ ಬಗ್ಗೆ ನನಗೆ ಗೊತ್ತಿಲ್ಲ. ನಾವು ಜಮೀನಿನಲ್ಲಿ ಗಣಿಗಾರಿಕೆಯನ್ನು ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ನಾವು ಗೌಪ್ಯವಾಗಿ ಇಟ್ಟುಕೊಂಡಿದ್ದೇವೆ ಎಂದರೆ ಸರಿಯಲ್ಲ.

**15**. ಅರ್ಜಿದಾರರು ಮದುವೆಗೆ ಮುಂಚೆ ಮಾಡಿಸಿಕೊಂಡಿರುವ ಒಡವೆಗಳನ್ನು ಬಿಲ್ ಗಳನ್ನು ಹಾಜರು ಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅರ್ಜಿದಾರರು ಕಡಿಮೆ ಆದಾಯದಿಂದ ಆಗಿಂದಾಗ್ಗೆ ಒಡವೆಗಳನ್ನು ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಸಹ ಉತ್ತಮ ಸ್ಥಿತಿಯಲ್ಲಿರುವ ಬಗ್ಗೆ ದಾಖಲೆಗಳನ್ನು ನೀಡಿದ್ದೇವೆ ಎಂದು ತಿಳಿಸಿರುತ್ತಾರೆ.

**16**. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಿದ್ದು ಸದರಿ ಫೋಟೋದಲ್ಲಿ ನಾವು ಗಣಿಗಾರಿಕೆಯನ್ನು ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಮದುವೆಯಾದ ನಂತರ ಬೆಳಗಿನ ಸಮಯದಲ್ಲಿಯೇ ಆರತಕ್ಷತೆ ಕಾರ್ಯಕ್ರಮ ನಡೆದಿರುತ್ತದೆ. ನಿಪಿ-8 ರಲ್ಲಿರುವ ಮನೆ ನಾವು ವಾಸವಾಗಿರುವ ಮನೆ ಎಂದರೆ ಸರಿ.

ನನ್ನ ವಿರುದ್ಧ ಪೋಕ್ಸೊ ಪ್ರಕರಣ ವಜಾ ಆಗಿರುತ್ತದೆ. ಸದರಿ ದಾಖಲೆಯನ್ನು ಸಲ್ಲಿಸಲು ತೊಂದರೆ ಇಲ್ಲ.

ಈ ಹಂತದಲ್ಲಿ ಎದುರುದಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದರಿಂದ ಕಾಲಾವಕಾಶವನ್ನು ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ